C.R.P.67

| Form No.4 (Civil) Deposition Sheets (R.P.No.57) |
|---|

## 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

### ಎಸ್ ಸಿ ಸಂಖ್ಯೆ:101/2023 C/W SC 113/2023

ಪ್ರಾಸಾ. 05 ಚಾಸಾ. 05

| | |
|---|---|
| ಸಾಕ್ಷಿದಾರರ ಹೆಸರು | ರಘು |
| ತಂದೆಯ ಹೆಸರು | ಲೇಟ್ ಮಾಯಿಗೌಡ |
| ವಯಸ್ಸು | 67 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ದೊಡ್ಡರಸಿನಕೆರೆ |

ಸಾಕ್ಷಿಯನ್ನು ದಿನಾಂಕ:07.04.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ನಾನು ದೊಡ್ಡರಸಿನಕೆರೆ ಗ್ರಾಮ ಪಂಚಾಯಿತಿ ಸದಸ್ಯನಾಗಿರುತ್ತೇನೆ. ಚಾಸಾ-3 4 ಗೊತ್ತು, ಚಾಸಾ-1 ಮತ್ತು 2 ಗೊತ್ತಿಲ್ಲ. ಮೃತ ಅರುಣ ಉ: ಕಪ್ಪೆ ಗೊತ್ತು. ಈ ಪ್ರಕರಣದಲ್ಲಿ ಹಾಗೂ ನ್ಯಾಯಾಲಯ ಮುಂದೆ ಇರುವ 1 ರಿಂದ 3, 6 ಮತ್ತು 8 ನೇ ಆರೋಪಿಗಳು ಗೊತ್ತು, 4, 5, 7 ನೇ ಆರೋಪಿತರು ಗೊತ್ತಿಲ್ಲ. ಉಳಿದ ಆರೋಪಿತರು ನಮ್ಮ ಗ್ರಾಮದವರು.

2. ನಾನು ಸುಮಾರು ಎರಡು ವರ್ಷದ ಹಿಂದೆ ಅರುಣ ಕೊಲೆಯಾಗಿ ತೀರಿಕೊಂಡಿದ್ದಾನೆ ಆದರೆ ಆತನ ಮೇಲೆ ಯಾರು ಹಲ್ಲೆ ಮಾಡಿದರು, ಹೇಗೆ ತೀರಿಕೊಂಡನು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಹಲ್ಲೆ ಮಾಡಿರುವುದನ್ನು ನಾನು ನೊಡಿರುವುದಿಲ್ಲ ಮತ್ತು ನಾನು ಯಾವುದೇ ಜಗಳ ಬಿಡಿಸಿರುವುದಿಲ್ಲ. ಪೊಲೀಸರು ನನ್ನ ವಿಚಾರಣೆ ಮಾಡಿದರು, ಆದರೆ ಘಟನೆಯ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಮು.ಮ.2 ನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿಃ20.11.2022 ರಂದು ಸಂಜೆ 4.00 ಸಮಯದಲ್ಲಿ ನಾನು ನಮ್ಮ ಗ್ರಾಮದ ಮುಖಂಡರ ಜೊತೆ ಸೊಸೈಟಿ/ದರ್ಮಸ್ಥಳ ಸಂಘದ ಬಳಿ ಕುಳಿತಿದ್ದಾಗ ಮೃತನಿಗೆ ಹಾಗೂ 1 ರಿಂದ 5ನೇ ಆರೋಪಿಗೆ ಗಲಾಟೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಅರುಣನಿಗೆ 1, 3 ಮತ್ತು ಇತರರು ಸೇರಿ ಅಲ್ಲೇ ಬಿದ್ದಿದ್ದ ಒಂದು ಸಿಮೆಂಟ್ ಕಲ್ಲನ್ನು ಎತ್ತಿಕೊಂಡು ಗುದ್ದಿದ ಅರುಣ್ ಕೆಳಗಡೆ ಬಿದ್ದನು. ಆಗ 2ನೇ ಆರೋಪಿ ಮತ್ತು ಇನ್ನೊಬ್ಬ ಹುಡುಗ ಅರುಣನಿಗೆ ಕಾಲಿನಿಂದ ತುಳಿದನು, ಅದನ್ನು ನಾನು ಕಣ್ಣಾರೆ ನೋಡಿದೆ ಎಂದರೆ ಸರಿಯಲ್ಲ. ಆಗ ಉಳಿದ ಆರೋೇಪಿತರು ಅರುಣನ ಮೇಲೆ ಕಲ್ಲನ್ನು ಎತ್ತಿಕೊಂಡು ಹಣೆ ಮೇಲೆ ಹೊಡೆದಾಗ ನಾನು ಕೂಗಿಕೊಂಡು ಜಗಳ ಬಿಡಿಸಲು ಮುಂದಾದೆ ಎಂದರೆ ಸರಿಯಲ್ಲ. ಆಗ ಚಾಸಾ-1 ಆತನನ್ನು ಎತ್ತಿಕೊಂಡು ಸಹಾಕಾರ ಸಂಘನ ಮೆಟ್ಟಿಲಿನ ಮೇಲೆ ಕೂರಿಸಿ ಅರುಣನ ಮುಖ ಒರೆಸಿ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನು. ಚಾಸಾ-2 ತನ್ನ ವಾಹನದಲ್ಲಿ ಚಾಲನೆ ಮಾಡಿಕೊಂಡು ಅರುಣನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದನು.

2. ನಂತರ ಆತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಆತನ ಮೇಲೆ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಆತ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ 10.30 ರಲ್ಲಿ ಮೃತಪಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

3. ನಾನು ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಕಾರ ನಾನು ಪೊಲೀಸರು ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕಯನ್ನು ನಿಪಿ-13 ಎಂದು ಗುರುತಿಸಲಾಯಿತು. ಅದೇ

ರೀತಿ ಪೊಲೀಸ್ ಠಾಣೆಯಲ್ಲಿ 4 ಮತ್ತು 5ನೇ ಆರೋಪಿಯನ್ನು ನೋಡಿ ಸದರಿ ಘಟನೆಯ ದಿನ ಇದ್ದು ಅರುಣನ ಮೇಲೆ ಹಲ್ಲೆ ಮಾಡಿದ ಬಗ್ಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ. ಸದರಿ ಮುಂದುವರೆದ ಹೇಳಿಕೆಯನ್ನು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು.

4. ಎಲ್ಲ ಆರೋಪಿತರು ಸೇರಿ ಮೃತ ಅರುಣನ ಮೇಲೆ ಹಲ್ಲೆ ಮಾಡಿದ ಕಾರಣ ಕಪ್ಪೆ ತೀರಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿದ್ದರೂ ಸಹ ಈಗ ನಾನು ಆರೋಪಿತರಿಗೆ ನನಗೆ ಪರಿಚಯವಿದ್ದ ಕಾರಣ ಹಾಗೂ ನಮ್ಮ ಗ್ರಾಮದವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಅದೇ ರೀತಿ ಮು.ಮ.2 ರಿಂದ 1 ರಿಂದ 5ನೇ ಆರೊಪಿತರು ಮೃತ ಅರುಣನ ಮೇಲೆ ಸೊಸೈಟಿ ಬಳಿ ಹಲ್ಲೆ ಮಾಡಿರುವುದನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್.ಡಿ.ಆರ್. ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.